# ಜಿಲ್ಲಾಧಿಕಾರಿಗಳ ಕಛೇರಿ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ-577 501

ಇ-ಮೇಲ್ ವಿಳಾಸ: deo.chitradurga@gmail.com ದೂರವಾಣಿ ಸಂ: 08194-224027


ನಂ.ಎಲ್.ಎ.ಕ್ಯೂ.ಸಿ.ಆರ್:16(HLK)/2018-19 ದಿನಾಂಕ:27-06-2019

ನಮೂನೆ-01

ಭಾಗ-ಎ

## ಸಾಮಾಜಿಕ ಪರಿಣಾಮ ನಿರ್ಧರಣೆ ಅಧಿಸೂಚನೆ

(ನಿಯಮ 3(6)ನ್ನು ನೋಡಿ)

ಹೊಸದುರ್ಗ-ಚಿಕ್ಕಜಾಜೂರು ರೈಲ್ವೆ ಡಬ್ಲಿಂಗ್ ಯೋಜನೆಯ ನಿರ್ಮಾಣಕ್ಕಾಗಿ ಡೆಪ್ಯೂಟಿ ಚೀಫ್ ಇಂಜಿನಿಯರ್ (ಕನ್‌ಸ್ಟ್ರಕ್ಷನ್), ನಾರ್ತ್ ರೈಲ್ವೆ, ಕಂಟೋನ್ಮೆಂಟ್, 18 ಮಿಲ್ಲರ್ಸ್ ರೋಡ್ ಬೆಂಗಳೂರು ರವರಿಗೆ ಈ ಕೆಳಗಿನ ಕೋಷ್ಟಕದಲ್ಲಿನ ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕಿನ 4 ಗ್ರಾಮಗಳ 6-11 ಎಕರೆ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಹೊಸದುರ್ಗ-ಚಿಕ್ಕಜಾಜೂರು ರೈಲ್ವೆ ಡಬ್ಲಿಂಗ್ ಯೋಜನೆ ನಿರ್ಮಾಣಕ್ಕಾಗಿ ಅತ್ಯಗತ್ಯವಾಗಿ ಬೇಕಾಗಿರುವುದೆಂದು ಜಿಲ್ಲಾಧಿಕಾರಿ ಚಿತ್ರದುರ್ಗ ರವರು ಭಾವಿಸಿರುವುದರಿಂದ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ) ನಿಯಮಗಳು-2015" ರ ನಿಯಮ 3(6) ರಂತೆ ಈ ಸಾಮಾಜಿಕ ಪರಿಣಾಮ ನಿರ್ಧರಣೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.

:ಭೂಸ್ವಾಧೀನವಾಗುವ ಜಮೀನಿನ ವಿವರಗಳು:

| ಕ್ರ ಸಂ | ತಾಲ್ಲೂಕು | ಹೋಬಳಿ | ಗ್ರಾಮ ಪಂಚಾಯಿತಿ | ಗ್ರಾಮಗಳ ಹೆಸರು | ಭೂ ಸ್ವಾಧೀನದ ಪ್ರಸ್ತಾವನೆಯ ಒಟ್ಟು ವಿಸ್ತೀರ್ಣ ಎ-ಗು |
|---|---|---|---|---|---|
| 1 | ಹೊಳಲ್ಕೆರೆ | ಬಿ.ದುರ್ಗ | ಚಿಕ್ಕಎಮ್ಮಿಗನೂರು | ಕೋಟೆಹಾಳ್ | 4-24 ಎಕರೆ |
| 2 | ಹೊಳಲ್ಕೆರೆ | ಕಸಬಾ | ಅರೇಹಳ್ಳಿ | ಪುಣಜೂರು | 1-12 ಎಕರೆ |
| 3 | ಹೊಳಲ್ಕೆರೆ | ರಾಮಗಿರಿ | ಆರ್.ನುಲೇನೂರು | ಆರ್.ನುಲೇನೂರು | 0-09 ಗುಂಟೆ |
| 4 | ಹೊಳಲ್ಕೆರೆ | ರಾಮಗಿರಿ | ರಾಮಗಿರಿ | ರಾಮಗಿರಿ | 0-06 ಗುಂಟೆ |

"ಭೂ ಸ್ವಾಧಿನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013"ರ ಕಲಂ 4 ರಿಂದ 9 ಹಾಗೂ "ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ) ನಿಯಮಗಳು-2015"ರ ನಿಯಮ 3 ರಿಂದ 15 ರಂತೆ ಭೂ ಸ್ವಾಧೀನವಾಗುವ ಜಮೀನುಗಳು ಹಾಗೂ ಈ ಪರಿಣಾಮ ನಿರ್ಧರಣೆ ಮಾಡಲು **ಲೀಡ್ (ರಿ) ರೈತ ಭವನ, ಎ.ಪಿ.ಎಂ.ಸಿ ಯಾರ್ಡ್, ವಿನೋಬನಗರ, ಶಿವಮೊಗ್ಗ** ರವರನ್ನು ನಿಯೋಜಿಸಲಾಗಿದೆ.

. . . .2

ಸದರಿಯವರು ತಮ್ಮ ತಂಡದೊಂದಿಗೆ ಈ ಮೇಲ್ಕಾಣಿಸಿದ ಗ್ರಾಮಗಳಿಗೆ ದಿನಾಂಕ:15-07-2019 ರಿಂದ ದಿನಾಂಕ:20-07-2019 ರವರಿಗೆ (ತಾತ್ಕಾಲಿಕ ವೇಳಾಪಟ್ಟಿ) ಭೇಟಿ ನೀಡಿ ವಿವರಗಳನ್ನು ಕಲೆ ಹಾಕಿ ಅಧ್ಯಯನ ನಡೆಸಲಿದ್ದಾರೆ. ಈ ಅಧ್ಯಯನದ ಭಾಗವಾಗಿ ಸಂಬಂಧಿಸಿದ ಗ್ರಾಮಗಳ ಜಮೀನುಗಳ ಭೂ ಮಾಲೀಕರು, ರೈತರು, ಗ್ರಾಮಸ್ಥರು ಮತ್ತು ಗ್ರಾಮದ ಮುಖಂಡರ ಸಮ್ಮುಖದಲ್ಲಿ ಗ್ರಾಮ ಸಭೆಗಳು, ರೈತರೊಂದಿಗೆ ಮುಖಾಮುಖಿ ಸಂವಾದ ನಡೆಸಿ ಅಭಿಪ್ರಾಯ ಸಂಗ್ರಹಿಸಲಿದ್ದಾರೆ.

ಸದರಿ ಭೂ ಸ್ವಾಧೀನದ ಬಗ್ಗೆ ಯಾವುದಾದರೂ ಆಕ್ಷೇಪಣೆಗಳು/ಅಭಿಪ್ರಾಯಗಳು ಇದ್ದಲ್ಲಿ ಗ್ರಾಮ ಸಭೆಯ ದಿನದಂದು ಅದಕ್ಕೆ ಸಂಬಂಧಿಸಿದ ದಾಖಲೆಗಳೊಂದಿಗೆ **ಲೀಡ್ (ರಿ) ರೈತ ಭವನ, ಎ.ಪಿ.ಎಂ.ಸಿ ಯಾರ್ಡ್, ವಿನೋಬನಗರ, ಶಿವಮೊಗ್ಗ** ರವರಿಗೆ ನೀಡುವುದು. ಈ ಸಮಯದ ನಂತರ ಬಂದ ಆಕ್ಷೇಪಣೆಗಳು ಹಾಗೂ ಈ ಮೊದಲೇ ಸಲ್ಲಿಸಲಾದ ಆಕ್ಷೇಪಣೆಗಳು ಸಮಂಜಸವಾಗಿಲ್ಲದಿದ್ದಲ್ಲಿ, ಆಧಾರ ರಹಿತವಾಗಿರದಿದ್ದಲ್ಲಿ ಯಾವುದೇ ಚರ್ಚೆ ಇಲ್ಲದೆ ತಿರಸ್ಕರಿಸಲಾಗುವುದು ಮತ್ತು ಯಾವುದೇ ರೀತಿಯಲ್ಲಿ ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಿದೆ. ಭೂಸ್ವಾಧೀನಕ್ಕೆ ಸಂಬಂಧಿಸಿದ ಜಮೀನುಗಳ ವಿವರಗಳನ್ನು ಉಪವಿಭಾಗಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿಗಳು, ಹೊಸದುರ್ಗ-ಚಿಕ್ಕಜಾಜೂರು ರೈಲ್ವೆ ಡಬ್ಲಿಂಗ್ ಯೋಜನೆ, ಉಪವಿಭಾಗಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿ, ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ ರವರ ಕಛೇರಿಯ ಕೆಲಸದ ವೇಳೆಯಲ್ಲಿ ಪರಿಶೀಲಿಸಬಹುದು. ಇಲ್ಲವಾದಲ್ಲಿ ಗ್ರಾಮ ಸಭೆಯ ದಿನದಂದು ಗ್ರಾಮ ಸಭೆಯಲ್ಲಿ ಪರಿಶೀಲಿಸಬಹುದು.

ಈ ಮೇಲ್ಕಂಡ ಸಾಮಾಜಿಕ ಪರಿಣಾಮ ನಿರ್ಧರಣೆಯ ಸರ್ಕಾರವು ನೀಡಿದ ನಿರ್ದೇಶನ, ಸುತ್ತೋಲೆ ಹಾಗೂ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013" ರ ಅಧ್ಯಾಯ-2 ಕಲಂ.4 ರಿಂದ 9 ಹಾಗೂ "ಭೂಸ್ವಾಧಿನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ) ನಿಯಮಗಳು-2015" ರ ಅಧ್ಯಾಯ 2 ರ ನಿಯಮ 3 ರಿಂದ 15 ರಂತೆ ನಡೆಯುತ್ತದೆ.

ಈ ಅಧ್ಯಯನದ ಮೇಲೆ ಯಾವುದೇ ವ್ಯಕ್ತಿ ಯಾವುದೇ ರೀತಿಯ ಪ್ರಭಾವ ಬೀರುವುದಾಗಲಿ, ಪ್ರಲೋಬನೆ ಉಂಟುಮಾಡುವುದಾಗಲಿ ಮಾಡುವಂತಿಲ್ಲ, ಯಾವುದೇ ರೀತಿಯ ಪ್ರಭಾವ ಬೀರಿದರೆ, ಪ್ರಲೋಬನೆ ಉಂಟು ಮಾಡಿದರೆ ಕಾನೂನು ಪ್ರಕಾರ ಸೂಕ್ತ ಕ್ರಮ ಜರುಗಿಸಲಾಗುವುದು.

ಗ್ರಾಮ ಸಭೆಗಳು, ಭೂ ಮಾಲೀಕರೊಂದಿಗಿನ ಸಮಾಲೋಚನೆಗಳ ನಂತರ ಕರಡು ಸಾಮಾಜಿಕ ಪರಿಣಾಮ ನಿರ್ಧರಣೆಯನ್ನು ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗುವುದು. ನಂತರ ಕರಡು ಸಾಮಾಜಿಕ ಪರಿಣಾಮ ನಿರ್ಧರಣೆಯನ್ನು ಗ್ರಾಮ ಸಭೆಯಲ್ಲಿ ಮಂಡಿಸಿ ಅಭಿಪ್ರಾಯ ಸಂಗ್ರಹಿಸಲಾಗುವುದು. ನಂತರ ವಿಶೇಷ ತಜ್ಞರ ತಂಡಕ್ಕೆ ಕಳುಹಿಸಿ, ಅವರಿಂದ ಯಾವುದಾದರೂ ಶಿಫಾರಸ್ಸುಗಳು ಇದ್ದಲ್ಲಿ ಅವುಗಳನ್ನು ಪರಿಗಣಿಸಿ ಅಂತಿಮವಾಗಿ ಎಲ್ಲಾ ಆಕ್ಷೇಪಣೆಗಳನ್ನು ವಿಲೇವಾರಿ ಮಾಡಿ ಸಾಮಾಜಿಕ ಪರಿಣಾಮ ನಿರ್ಧರಣೆ (ಎಸ್.ಐ.ಎ) ವರದಿ ಹಾಗೂ ಸಾಮಾಜಿಕ ಪರಿಣಾಮ ವ್ಯವಸ್ಥಾಪನಾ ಯೋಜನೆ (ಎಸ್.ಐ.ಎಂ.ಪಿ) ಯನ್ನು **ರಾಜ್ಯ ಆಯುಕ್ತರು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು** ರವರಿಗೆ ಅನುಮೋದನೆಗಾಗಿ ಸಲ್ಲಿಸಲಾಗುವುದು.

. . . .3

ಯಾವುದಾದರೂ ಅನಿವಾರ್ಯ ಅಥವಾ ಇತರೆ ಕಾರಣಗಳಿಂದ ಗ್ರಾಮ ಸಭೆಯ ದಿನಾಂಕಗಳನ್ನು ಬದಲಾಯಿಸಲು ಮತ್ತು ಬೇರೆ ದಿನಾಂಕಗಳನ್ನು ನಿಗಧಿಪಡಿಸಲು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯು ಅಧಿಕಾರ ಹೊಂದಿರುತ್ತಾರೆ.

ಜಿಲ್ಲಾಧಿಕಾರಿ
ಚಿತ್ರದುರ್ಗ ಜಿಲ್ಲೆ
ಚಿತ್ರದುರ್ಗ

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಭೂಸ್ವಾಧೀನ–2), 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ರಾಜ್ಯ ಆಯುಕ್ತರು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಜಿಲ್ಲೆ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು ಚಿತ್ರದುರ್ಗ ಉಪವಿಭಾಗ ಚಿತ್ರದುರ್ಗ ರವರಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ ಕಳುಹಿಸಿದೆ.
5. ಡೆಪ್ಯೂಟಿ ಚೀಫ್ ಇಂಜಿನಿಯರ್ (ಕನ್‌ಸ್ಟ್ರಕ್ಷನ್), ನಾರ್ತ್ ರೈಲ್ವೆ, ಕಂಟೋನ್ಮೆಂಟ್, 18 ಮಿಲ್ಲರ್ಸ್ ರೋಡ್ ಬೆಂಗಳೂರು
6. ತಹಶೀಲ್ದಾರ್, ಹೊಳಲ್ಕೆರೆ ತಾಲ್ಲೂಕು ರವರಿಗೆ ಮಾಹಿತಿಗಾಗಿ ಮತ್ತು ಸದರಿ ಅಧಿಸೂಚನೆಯನ್ನು ತಾಲ್ಲೂಕು ಕಛೇರಿಯಲ್ಲಿ, ಸಂಬಂಧಪಟ್ಟ ಗ್ರಾಮ ಪಂಚಾಯತ್ ಹಾಗೂ ಗ್ರಾಮ ಚಾವಡಿಗಳಲ್ಲಿ ನಿಯಮಾನುಸಾರ ಪ್ರಚುರಪಡಿಸಿ, ಮಹಜರ್‌ನೊಂದಿಗೆ ವರದಿ ಮಾಡಲು ತಿಳಿಸಿದೆ.
7. ಜಿಲ್ಲಾ ಮಾಹಿತಿ ಅಧಿಕಾರಿ, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್.ಐ.ಸಿ) ಜಿಲ್ಲಾಧಿಕಾರಿಗಳ ಕಛೇರಿ ಚಿತ್ರದುರ್ಗ ಜಿಲ್ಲೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು ಸೂಚಿಸಿದೆ.
8. ಅಧ್ಯಕ್ಷರು, ಲೀಡ್(ರಿ) ರೈತ ಭವನ, ಎ.ಪಿ.ಎಂ.ಸಿ ಯಾರ್ಡ್, ವಿನೋಬನಗರ, ಶಿವಮೊಗ್ಗ.
9. ಕಛೇರಿ ಪ್ರತಿ.

# ಜಿಲ್ಲಾಧಿಕಾರಿಗಳ ಕಛೇರಿ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ-577 501

ಇ-ಮೇಲ್ ವಿಳಾಸ: deo.chitradurga@gmail.com ದೂರವಾಣಿ ಸಂ: 08194-224027

---

ನಂ.ಎಲ್.ಎ.ಕ್ಯೂ.ಸಿ.ಆರ್:16(HLK)/2018-19 ದಿನಾಂಕ:27-06-2019

## ಸಾರ್ವಜನಿಕ ಪ್ರಕಟಣೆ

ಹೊಸದುರ್ಗ-ಚಿಕ್ಕಜಾಜೂರು ರೈಲ್ವೆ ಡಬ್ಲಿಂಗ್ ಯೋಜನೆಗೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕಿನ 4 ಗ್ರಾಮಗಳ 6-11 ಎಕರೆ ಜಮೀನು ಭೂಸ್ವಾಧೀನವಾಗಲಿದ್ದು, ಸದರಿ ಜಮೀನುಗಳಿಗೆ **ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ (ಕರ್ನಾಟಕ) ನಿಯಮಾವಳಿ-2015ರ ನಿಯಮ-03** ರಂತೆ ಸಾಮಾಜಿಕ ಪರಿಣಾಮ ನಿರ್ಧರಣೆಯನ್ನು ಮಾಡಬೇಕಾಗಿದೆ. ಸದರಿ ಕಾರ್ಯವನ್ನು ನಿರ್ವಹಿಸಲು **ಲೀಡ್ (ರಿ) ರೈತ ಭವನ, ಎ.ಪಿ.ಎಂ.ಸಿ ಯಾರ್ಡ್, ವಿನೋಬನಗರ, ಶಿವಮೊಗ್ಗ** ರವರನ್ನು ಏಜೆನ್ಸಿಯಾಗಿ ನೇಮಕ ಮಾಡಿದ್ದು, ಸದರಿಯವರು ತಮ್ಮ ತಂಡದೊಂದಿಗೆ ಈ ಕೆಳಗಿನ ವೇಳಾಪಟ್ಟಿಯಂತೆ ಗ್ರಾಮಗಳಿಗೆ ಭೇಟಿ ನೀಡಿ ದತ್ತಾಂಶವನ್ನು ಸಂಗ್ರಹಿಸಲಿದ್ದಾರೆ. ಭೂ ಸ್ವಾಧೀನವಾಗಲಿರುವ ಜಮೀನುಗಳ ಭೂ ಮಾಲೀಕರು ಸದರಿ ದಿನಾಂಕಗಳಂದು ದಾಖಲೆಗಳೊಂದಿಗೆ ಹಾಜರಿದ್ದು, **1) ಎಲ್ಲಾ ಜಮೀನಿನ ಸಂಬಂಧಪಟ್ಟ ಪಟ್ಟಾ ಪುಸ್ತಕ, 2) ಯೋಜನೆಗೆ ಒಳಪಡುವ ಜಮೀನಿನ ಪಹಣಿ, 3) ಮನೆಯ ಎಲ್ಲಾ ಸದಸ್ಯರ ಆಧಾರ್ ಕಾರ್ಡ್, ಓಟರ್ ಕಾರ್ಡ್, ರೇಷನ್ ಕಾರ್ಡ್, ಜಾಬ್ ಕಾರ್ಡ್ ಹಾಗೂ ಯಶಸ್ವಿನಿ ಕಾರ್ಡ್, 4) ಬ್ಯಾಂಕ್ ಪಾಸ್ ಪುಸ್ತಕ** ಕಡ್ಡಾಯವಾಗಿ ತಂದು ಮಾಹಿತಿ ನೀಡಲು ಸೂಚಿಸಿದೆ.

## :ವೇಳಾ ಪಟ್ಟಿ:

| ಕ್ರ ಸಂ | ತಾಲ್ಲೂಕು | ಹೋಬಳಿ | ಗ್ರಾಮ ಪಂಚಾಯಿತಿ | ಗ್ರಾಮಗಳ ಹೆಸರು | ಗ್ರಾಮಕ್ಕೆ ಭೇಟಿ ನೀಡುವ ದಿನಾಂಕ | |
|---|---|---|---|---|---|---|
| | | | | | ಇಂದ | ವರೆಗೆ |
| 1 | ಹೊಳಲ್ಕೆರೆ | ಬಿ.ದುರ್ಗ | ಚಿಕ್ಕಎಮ್ಮಿಗನೂರು | ಕೋಟೆಹಾಳ್ | 15-7-19 | 15-7-19 |
| 2 | ಹೊಳಲ್ಕೆರೆ | ಕಸಬಾ | ಅರೇಹಳ್ಳಿ | ಮಣಜೂರು | 16-7-19 | 16-7-19 |
| 3 | ಹೊಳಲ್ಕೆರೆ | ರಾಮಗಿರಿ | ಆರ್.ನುಲೇನೂರು | ಆರ್.ನುಲೇನೂರು | 17-7-19 | 17-7-19 |
| 4 | ಹೊಳಲ್ಕೆರೆ | ರಾಮಗಿರಿ | ರಾಮಗಿರಿ | ರಾಮಗಿರಿ | 18-7-19 | 18-7-19 |

ಸದರಿ ದಿನಗಳಂದು ಅನಿವಾರ್ಯ ಕಾರಣಗಳಿಂದ ಮಾಹಿತಿ ನೀಡಲಾಗದ ಭೂ ಮಾಲೀಕರು ಸದರಿ ಗ್ರಾಮ ಪಂಚಾಯಿತಿ ಕಛೇರಿಗೆ ಆಗಮಿಸಿ ತಮ್ಮ ವಿವರಗಳನ್ನು ನೀಡಲು ಈ ಮೂಲಕ ಸೂಚಿಸಿದೆ.

ಜಿಲ್ಲಾಧಿಕಾರಿ
ಚಿತ್ರದುರ್ಗ ಜಿಲ್ಲೆ
ಚಿತ್ರದುರ್ಗ